ಉಮ್ಮತ್ತೂರ್.

ಬೆಂಗಳೂರು-ಟಿ.ನರಸೀಪುರ, ಕುದೇರು, ವೇಗದೂತ ಸಾರಿಗೆಯು ಅನುಸೂಚಿ ಸಂಖ್ಯೆ ಘಟಕ 1:61ನ್ನು ದಿನಾಂಕ: 13-9-2001 ರಿಂದ ಟಿ.ನರಸೀಪುರ ಮತ್ತು ಕುದೇರು ನಡುವೆ ಸಾಕಷ್ಟು ಪ್ರಯಾಣಿಕರು ಇಲ್ಲದ ಕಾರಣ ಟಿ.ನರಸೀಪುರದವರೆಗೆ ಕಾರ್ಯಚರಣೆ ಗೊಳಿಸಲಾಗುತ್ತಿದೆ. ಈ ಮಾರ್ಗವು ರಾಷ್ಟ್ರೀಕೃತದಲ್ಲದ ವಲಯದಲ್ಲಿದ್ದು ಖಾಸಗಿ ಪ್ರವರ್ತಕರುಗಳ ಬಸ್ಸುಗಳು ಕಾರ್ಯಚರಣೆಯಲ್ಲಿರುತ್ತದೆ.

ಖಾಸಗಿ ಸಾರಿಗೆ ಸಂಸ್ಥೆಯೊಂದರ ಎರಡು ಬಸ್ಸುಗಳಿಗೆ ಒಂದೇ ನೋಂದಣಿ ಸಂಖ್ಯೆಯನ್ನು ನಮೂದಿಸಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 48(206)

ಸದಸ್ಯರ ಹೆಸರು: ಶ್ರೀ ಸುರೇಶ್‌ಕುಮಾರ್ ಎಸ್.(ರಾಜಾಜಿನಗರ)

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ. ಬೆಂಗಳೂರಿನ ಖಾಸಗಿ ಸಾರಿಗೆ ಸಂಸ್ಥೆಯೊಂದು ತನ್ನ ಎರಡು ಬಸ್ಸುಗಳಿಗೆ ಒಂದೇ ನೋಂದಣಿ ಸಂಖ್ಯೆಯನ್ನು ನಮೂದಿಸಿಕೊಂಡು ಸಂಚರಿಸುತ್ತಿದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ, ಈ ಸಂಸ್ಥೆಯ ವಿರುದ್ಧ ಕ್ರಮ ಜರುಗಿಸಲಾಗಿದೆಯೇ?

ಇ. ರಾಜ್ಯದಲ್ಲಿ ಎಷ್ಟು ಈ ರೀತಿಯ ವಂಚನೆ ಪ್ರಕರಣಗಳು ದಾಖಲಾಗಿವೆ?

ಈ. ಅಂತಹ ವಾಹನಗಳ ಒಡೆತನ ಹೊಂದಿದ ಸಂಸ್ಥೆಗಳಾವುವು? ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಉತ್ತರ

ಅ. ಬಂದಿದೆ.

ಆ. ಆರಕ್ಷಕ ಠಾಣೆಗಳಲ್ಲಿ ಮೊಖದ್ದಮೆಯು ದಾಖಲಾಗಿದ್ದು ತನಿಖೆಯು ಪ್ರಗತಿಯಲ್ಲಿದೆ.

ಇ. ಮೂರು ಪ್ರಕರಣಗಳು ದಾಖಲಾಗಿದೆ.

ಈ. 1. ನ್ಯಾಷನಲ್ ಟ್ರಾವಲ್ಸ್, ಬೆಂಗಳೂರು.

2. ಮಾಸ್ಟರ್ ಟ್ರಾವಲ್ಸ್, ಬೆಂಗಳೂರು.

3. ಶ್ರೀ ನಾರಾಯಣಪ್ಪ, ಬೆಂಗಳೂರು.

ಸದರಿಯವರ ವಿರುದ್ಧ ಆರಕ್ಷಕ ಠಾಣೆಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ಕಾನೂನ ಕ್ರಮ ಜರುಗಿಸಲಾಗುತ್ತಿದೆ.

ಸಾರಿಗೆ ನಿಗಮಗಳ ಟೈನಿಗಳ ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 49(207)

ಸದಸ್ಯರ ಹೆಸರು: ಶ್ರೀ ಪೂಜಾರ್ ಪಿ.ಹೆಚ್.(ಬಾಗಲಕೋಟೆ)

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ. ರಾಜ್ಯದ ಸಾರಿಗೆ ಸಂಸ್ಥೆಗಳಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ತರಬೇತಿದಾರರ ಸಂಖ್ಯೆ ಎಷ್ಟು? ವಲಯವಾರು (ವಿಭಾಗ) ಹುದ್ದೆಗಳವಾರು ವಿವರ ನೀಡುವುದು?

ಆ. ಎಷ್ಟು ವರ್ಷಗಳಿಂದ ಈ ರೀತಿಯ ತರಬೇತಿದಾರರ ನೇಮಕ ಪದ್ಧತಿ ಜಾರಿಯಲ್ಲಿದೆ?

ಇ. ಇವರುಗಳ ತರಬೇತಿ ಅವಧಿ ಮುಗಿದ ಬಳಿಕ ಖಾಯಂಗೊಳಿಸಲಾಗಿದೆಯೇ?

ಈ. ಇನ್ನೂ ಖಾಯಂ ಆಗಬೇಕಾಗಿರುವ ತರಬೇತಿದಾರರ ಸಂಖ್ಯೆ ಎಷ್ಟು? ಅವರು ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ?

ಉತ್ತರ

ಅ. ರಾಜ್ಯದ ಸಾರಿಗೆ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ತರಬೇತಿದಾರರ ಸಂಖ್ಯೆಯನ್ನು ಈ ಕೆಳಗೆ ನೀಡಲಾಗಿದೆ.

ಕ.ರಾ.ರ.ಸಾ. ಸಂಸ್ಥೆ	:	917
ಬೆಂ.ಮ.ನ.ಸಾ. ಸಂಸ್ಥೆ	:	2407
ವಾ.ಕ.ರ.ಸಾ. ಸಂಸ್ಥೆ	:	2488
ಈ.ಕರ.ಸಾ. ಸಂಸ್ಥೆ	:	1542
ಒಟ್ಟು	:	7354

ವಿಭಾಗವಾರು, ಹುದ್ದೆವಾರು ತರಬೇತಿದಾರರ ವಿವರಗಳನ್ನು ಅನುಬಂಧ-ಅ ದಲ್ಲಿ ನೀಡಲಾಗಿದೆ.

ಆ. ಕ.ರಾ.ರ.ಸಾ. ಸಂಸ್ಥೆಯ 1982ರ (ಪದವ್ಯಂದ ಮತ್ತು ನೇಮಕಾತಿ) ನಿಯಮಾವಳಿಗಳು (1992ರಲ್ಲಿ ತಿದ್ದುಪಡಿಗೊಳಿಸಿದಂತೆ) ನಿಯಮಾವಳಿ 12(1 ಮತ್ತು 2)ರ ಪ್ರಕಾರ ಆಯ್ಕೆಯಾದ ಅಭ್ಯರ್ಥಿಗಳನ್ನು ತರಬೇತಿಯ ಮೇಲೆ ನಿಯೋಜಿಸುವ ಪದ್ಧತಿ 1995ರಿಂದ ಜಾರಿಯಲ್ಲಿದೆ.

ಇ. ಎರಡು ವರ್ಷ ತರಬೇತಿಯನ್ನು ತೃಪ್ತಿಕರವಾಗಿ ಮುಗಿಸಿದ ಎಲ್ಲಾ ತರಬೇತಿದಾರರನ್ನು ಪರಿವೀಕ್ಷಣಾರ್ಥಿಗಳಾಗಿ ನೇಮಿಸಲಾಗುವುದು. ಆದರೆ, ಗೈರು ಹಾಜರಿ: ಅಪಘಾತ: ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ತರಬೇತಿದಾರರಿಗೆ ಪ್ರಕರಣಗಳು ಇತ್ಯರ್ಥವಾದ ಮೇಲೆ ಖಾಯಂ ಮಾಡಲಾಗುತ್ತಿದೆ.

ಈ. ಖಾಯಂ ಆಗಬೇಕಿರುವ ತರಬೇತಿದಾರರ ಸಂಖ್ಯೆಯನ್ನು ಈ ಕೆಳಗೆ ನೀಡಲಾಗಿದೆ?

ಕ.ರಾ.ರ.ಸಾ. ಸಂಸ್ಥೆ	:	917
ಬೆಂ.ಮ.ನ.ಸಾ. ಸಂಸ್ಥೆ	:	2407
ವಾ.ಕ.ರ.ಸಾ. ಸಂಸ್ಥೆ	:	455
ಈ.ಕರ.ಸಾ. ಸಂಸ್ಥೆ	:	472
ಒಟ್ಟು	:	4251

ಇವರುಗಳು 3-4 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಇವರ ಅಪರಾಧ : ಅಪಘಾತ : ಗೈರುಹಾಜರಿ ಪ್ರಕರಣಗಳು ಇತ್ಯರ್ಥವಾದ ನಂತರ ಪರಿವೀಕ್ಷಣಾರ್ಥಿಗಳಾಗಿ ನೇಮಿಸಲಾಗುವುದು.

ಅನುಬಂಧ-ಅ

ರಾಜ್ಯ ಸಾರಿಗೆ ಸಂಸ್ಥೆಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ತರಬೇತಿದಾರರ ವಿವರ.

(ವಿಭಾಗವಾರು, ಹುದ್ದೆವಾರು)

ಕ.ರಾ.ರ.ಸಾ. ಸಂಸ್ಥೆ

ಕ್ರ. ಸಂ.	ವಿಭಾಗ	ಹುದ್ದೆ							ಒಟ್ಟು
		ಚಾಲಕ	ನಿರ್ವಾಹಕ	ಚಾ-ವ-ನಿ	ಕು. ಕ.	ಸ. ಕು.ಕ	ಸ-ಬಿ	ಭ. ರ.	
1	ಬೆಂಗಳೂರು(ಕೇ)	15	17	38	–	–	–	–	70
2	ಬೆಂಗಳೂರು(ಗ್ರಾ)	12	26	11	02	01	01	01	54
3	ತುಮಕೂರು	–	–	–	–	–	–	–	–
4	ಕೋಲಾರ	36	64	22	–	–	03	–	125
5	ಮೈಸೂರು(ನಗರ)	108	108	94	–	–	–	01	311
6	ಮೈಸೂರು(ಗ್ರಾ)	08	15	18	–	–	–	–	41
7	ಮಂಗಳೂರು	40	64	–	–	–	–	–	104
8	ಹಾಸನ	03	13	129	–	–	01	–	146
9	ಚಿಕ್ಕಮಗಳೂರು	06	03	36	01	–	–	–	46
10	ದಾವಣಗೆರೆ	06	14	–	–	–	–	–	20
	ಒಟ್ಟು	234	324	348	03	01	05	02	917

ಬೆಂ.ಮ.ನ.ಸಾ.ಸಂಸ್ಥೆ

ಕ್ರ. ಸಂ.	ವಿಭಾಗ	ಚಾಲಕ	ಹುದ್ದೆ							ಒಟ್ಟು
			ನಿರ್ವಾಹಕ	ಸ.ಸಂ.ನಿ.	ಕು.ಕ	ಸ.ಕು.ಕ.	ಸ-ಬಿ	ಭ.ರ.		
1	ಬೆಂ.ಮ.ನ. ಸಾ.ಸಂಸ್ಥೆ	987	1138	58	18	02	190	14		2407

ವಾ.ಕ.ರ.ಸಾ.ಸಂಸ್ಥೆ

ಕ್ರ. ಸಂ.	ವಿಭಾಗ	ಚಾಲಕ	ಹುದ್ದೆ								ಒಟ್ಟು
			ನಿರ್ವಾಹಕ	ಸ.ಸಂ.ನಿ.	ಕು.ಕ.	ಸ.ಕು.ಕ	ಸ-ಬಿ	ಭ.ರ.	ಕ.ಸ.	ಶುಚಿಗಾರ	
1	ಹುಬ್ಬಳ್ಳಿ	170	161	–	–	01	07	–	05	01	345
2	ಬೆಳಗಾವಿ	178	218	03	–	01	02	02	02	02	08
3	ಬಾಗಲಕೋಟೆ	84	61	–	01	01	02	–	04	01	154
4	ಬಿಜಾಪುರ	236	220	–	01	–	03	–	–	–	460
5	ಗದಗ	102	89	–	01	–	03	–	04	01	200
6	ಚಿಕ್ಕೋಡಿ	154	158	–	–	03	–	–	03	02	320
7	ಹಾವೇರಿ	135	140	–	–	–	04	03	01	07	290
8	ಶಿರಸಿ	139	166	–	–	–	03	–	–	03	311
	ಒಟ್ಟು	1198	1213	03	03	06	24	05	19	17	2488

ಈ.ಕ.ರ.ಸಾ. ಸಂಸ್ಥೆ

ಕ್ರ. ಸಂ.	ವಿಭಾಗ	ಹುದ್ದೆ												ಒಟ್ಟು
		ಚಾಲಕ	ನಿರ್ವಾಹಕ	ಚಾವಣಿ	ಕು.ಕ	ಸ.ಕು.ಕ	ಸ-ಬಿ	ಕ.ಸ.	ಶುಚಿಗಾರ	ಸ.ಸಂ.ನಿ	ಭ.ರ	ಪಾ.ಗಾರ	ಮಾಲಿ	
1	ಕೇಂದ್ರ ಕಛೇರಿ	–	–	–	–	–	–	02	–	01	–	–	–	02
2	ಗುಲ್ಬರ್ಗಾ	20	67	157	–	–	20	–	–	01	02	01	–	268
3	ರಾಯಚೂರು	30	73	108	–	–	–	–	01	–	–	–	01	213
4	ಬಳ್ಳಾರಿ	108	110	254	–	–	28	02	–	02	–	01	–	505
5	ಬೀದರ್	08	64	121	09	08	02	03	02	–	–	–	–	217
6	ಕೊಪ್ಪಳ	21	25	121	03	03	10	04	01	–	–	–	–	188
7	ಯಾದಗಿರಿ	15	37	83	–	–	–	05	02	–	06	–	–	148
	ಒಟ್ಟು	202	376	844	12	11	60	16	06	04	08	02	01	1542